**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ 693/2023**

| | | |
|---|---|---|
| ಹೆಸರು | ಗೋವಿಂದರಾಜ ಜಿ ಟಿ | ಡಿಡಬ್ಲ್ಯೂ -1 |
| ಗಂಡನ ಹೆಸರು | ಲೇಟ್ ತಿಪ್ಪೇಶಪ್ಪ | |
| ವಯಸ್ಸು | 34 ವರ್ಷ | |
| ಉದ್ಯೋಗ | ವಕೀಲರು | ದಿನಾಂಕ 07.12.2024 |
| ವಾಸ ಸ್ಥಳ | ಜಿಗಳಿ ಗ್ರಾಮ, ಹರಿಹರ ತಾಲ್ಲೂಕು, | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ** ಆರೋಪಿ ಪರ ವಕೀಲರಿಂದಃ

ನಾನು ಮತ್ತು ಪಿರ್ಯಾದಿ ಸುಮಾರು ವರ್ಷಗಳಿಂದ ಪರಿಚಯ ಇದ್ದು. ಪಿರ್ಯಾದಿಯು ನಮ್ಮ ಊರಿನಲ್ಲಿ ಮತ್ತು ನಮ್ಮ ಊರಿನ ಸುತ್ತಮುತ್ತ ಗ್ರಾಮಗಳಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾರೆ. ಅದರ ಜೊತೆಗೆ ಬಂಗಾರದ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ. ನನ್ನ ತಂದೆಯ ಜೀವಿತ ಕಾಲದಿಂದಲೂ ಪಿರ್ಯಾದಿಯ ಜೊತೆ ಹಣದ ವ್ಯವಹಾರ ಇತ್ತು. ಈ ರೀತಿಯಾಗಿ 2022 ರಲ್ಲಿ ನನ್ನ ಮನೆಯ ಖರ್ಚಿನ ಸಲುವಾಗಿ ಪಿರ್ಯಾದಿಯಿಂದ ರೂ. 1,25,000/-ಗಳನ್ನು ಸಾಲವಾಗಿ ಪಡೆದಿರುತ್ತೇನೆ. ನಂತರ ಅಕ್ಟೋಬರ 2022 ರಲ್ಲಿ ಪಿರ್ಯಾದಿಯು ಮನೆಗೆ ಬಂದು ಅಸಲು ಮತ್ತು ಬಡ್ಡಿ ಸೇರಿ 5-6 ಲಕ್ಷ ರೂ. ಆಗಿದೆ ಕೊಡು ಎಂದು ಕೇಳಿರುತ್ತಾರೆ. ಆಗ ನಾನು ಸದರಿ ಸಾಲದ ಮೊತ್ತ ಅಷ್ಟು ಅಗಿರುವುದಿಲ್ಲ ಪಂಚಾಯತಿ ಮಾಡೋಣ ಎಂದು ಹೇಳಿ ನಮ್ಮ ಊರಿನ ಮುಖಂಡರಾದ ಆನಂದಪ್ಪನವರ ಮನೆಗೆ ಕರೆದುಕೊಂಡು ಹೋದೆನು. ಆಗ ಆನಂದಪ್ಪ ನವರ ಮನೆಯಲ್ಲಿ ಪಂಚಾಯತಿ ನಡೆದಿದ್ದು, ಊರಿನ ಮುಖಂಡರಾದ ಪ್ರಕಾಶ, ಬಸವಂತಪ್ಪ, ಹಾಲೇಶಪ್ಪ, ಅಣ್ಣಪ್ಪ ಮತ್ತು ಬಸವರಾಜ ಹಾಗೂ ಮಂಜಣ್ಣ ರವರು ಪಂಚಾಯತಿ ಮಾಡಿ ರೂ.2,60,000/- ರಾಜೀ ಮಾಡಿದರು. ಸದರಿ ರಾಜೀಗೆ ನಾನು ಮತ್ತು ಪಿರ್ಯಾದಿ ಇಬ್ಬರೂ ಒಪ್ಪಿಕೊಂಡೆವು. ನಂತರ ದಿನಾಂಕ 05.12.2022 ರಂದು ನನ್ನ ಹಿರಿಯ ವಕೀಲರಿಂದ ರೂ.2,00,000/- ಹಣವನ್ನು ನನ್ನ ಖಾತೆಗೆ ಜಮೆ ಮಾಡಿಸಿಕೊಂಡೆನು. ನಂತರ ದಿನಾಂಕ 07.12.2022 ರಂದು ಆನಂದಪ್ಪ ನವರ ಮನೆಯಲ್ಲಿ ಈ ಹಿಂದೆ ಪಂಚಾಯತಿ ಮಾಡಿ ಊರಿನ ಮುಖಂಡರ ಸಮಕ್ಷಮ ಪಿರ್ಯಾದಿಗೆ ರೂ.1,99,000/- ಗಳನ್ನು ಕೊಟ್ಟಿರುತ್ತೇನೆ. ನಂತರ ಉಳಿದ ರೂ.61,000/- ಗಳಿಗೆ ಆರು ತಿಂಗಳ ಕಾಲಾವಕಾಶ ಕೇಳಿರುತ್ತೇನೆ. ನಂತರ ಪಂಚಾಯತಿಯಲ್ಲಿ ಪಿರ್ಯಾದಿದಾರರು ರೂ. 1,99,000/- ಗಳನ್ನು ಪಡೆದು ಹೋದರು. ದಿನಾಂಕ 27.06.2023 ರಂದು ಪಿರ್ಯಾದುದಾರರು ಲೀಗಲ್ ನೋಟಿಸ್ ನ್ನು ಕಳುಹಿಸಿರುತ್ತಾರೆ. ಸದರಿ ಲೀಗಲ್ ನೋಟಿಸ್ ನಲ್ಲಿ ರೂ.3,50,000/- ಗಳನ್ನು ಕೊಡುವುದು ಬಾಕಿ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ನೋಟಿಸನ್ನು ತೆಗೆದುಕೊಂಡು ಪಂಚಾಯತಿ ಮಾಡಿದ ಆನಂದಪ್ಪ ರವರ ಮನೆಗೆ ಹೋಗಿ ಮತ್ತು ಉಳಿದ ಪಂಚಾಯತಿದಾರರಿಗೆ ವಿಷಯವನ್ನು ತಿಳಿಸಿರುತ್ತೇನೆ. ಪಂಚಾಯತಿದಾರರು ಪಿರ್ಯಾದಿಯನ್ನು ಕರೆಯಿಸಿ

ಮಾತನಾಡುತ್ತೇವೆ ಎಂದು ಹೇಳಿರುತ್ತಾರೆ.

ದಿನಾಂಕ 21.08.2023 ರಂದು ಬೆಳಿಗ್ಗೆ 7.30 ರಿಂದ 8.00 ಗಂಟೆ ಸಮಯದಲ್ಲಿ ಪಿರ್ಯಾದುದಾರರು ನನ್ನ ಮನೆಯ ಹತ್ತಿರ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ ಮಾಡಿ, ನನ್ನ ಮೈ ಕೈ ಹಿಡಿದು ಎಳೆದಾಡಿದರು. ಸದರಿ ಗಲಾಟೆಯನ್ನು ಅಣ್ಣಪ್ಪ ಮತ್ತು ಇತರೆ ಜನರು ಬಂದು ಬಿಡಿಸಿದರು. ನಂತರ ನಾನು ಸದರಿ ಗಲಾಟೆ ವಿಚಾರವಾಗಿ ಮಲೆಬೆನ್ನೂರು ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ನಂತರ ಪಿರ್ಯಾದುದಾರರು ತನ್ನ ರಾಜಕೀಯ ಮತ್ತು ಹಣದ ಪ್ರಭಾವವನ್ನು ಬಳಸಿ ಪೊಲೀಸರಿಂದ ನನ್ನ ದೂರಿಗೆ ಬಿ ವರದಿಯನ್ನು ಹಾಕಿಸಿರುತ್ತಾರೆ. ಸದರಿ ಬಿ ವರದಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಮಾನ್ಯ ನ್ಯಾಯಾಲಯವು ನನ್ನ ಅರ್ಜಿಯನ್ನು ಪುರಸ್ಕರಿಸಿ ಪಿರ್ಯಾದುದಾರನ ವಿರುದ್ಧ Spl. C 344/2024 ರಂತೆ ಪ್ರಕರಣವನ್ನು ದಾಖಲಿಸಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿರುವ ಚೆಕ್ ಗೂ ಮತ್ತು ನನ್ನ ಹಾಗೂ ಪಿರ್ಯಾದಿಯ ಮಧ್ಯ ಆದ ವ್ಯವಹಾರಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ. ನಾನು ಪಿರ್ಯಾದಿಗೆ ಬಾಕಿ ರೂ. 61,000/- ಮಾತ್ರ ಕೊಡುವುದು ಇದೆ. ನಾನು ನೀಡಿರುವ ಖಾಲಿ ಚೆಕ್ ನ್ನು ಪಿರ್ಯಾದಿಯು ದುರುಪಯೋಗ ಪಡಿಸಿಕೊಂಡು ನನ್ನಿಂದ ಹೆಚ್ಚಿನ ಹಣವನ್ನು ಪಡೆಯುವ ಉದ್ದೇಶದಿಂದ ನನ್ನ ವಿರುದ್ಧ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿರುವ ಚೆಕ್ ನ್ನು ಆನಂದಪ್ಪನವರ ಮನೆಯಲ್ಲಿ ಆದ ಪಂಚಾಯತಿಯ ಕಾಲಕ್ಕೆ ಭದ್ರತೆಗಾಗಿ ಪಿರ್ಯಾದಿಗೆ ಕೊಟ್ಟಿದೆ. ಆಗ ಉಳಿದ ರೂ.61,000/- ಗಳನ್ನು ಪಾವತಿ ಮಾಡಿದ ನಂತರ ಚೆಕ್ ನ್ನು ನನಗೆ ವಾಪಸ್ ಕೊಡಬೇಕು ಎಂದು ಪಂಚಾಯತಿದಾರರು ಹೇಳಿದ್ದು, ಅದಕ್ಕೆ ನಾನು ಮತ್ತು ಪಿರ್ಯಾದಿಯು ಸಹ ಒಪ್ಪಿದ್ದೆವು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ